# People's Union for Civil Liberties – Karnataka

*Contact address: Ramdas Rao,  59 (II Floor) Shivaji Raod, Shivaji Nagar, Bangalore 560051*

*Email: puclblr@gmail.com*, rajendrayj@gmail.com

*Mobile no: 94490 11530*

**(Founder: Jai Prakash Narayan)**

---

**ರಾಜ್ಯ ಸರಕಾರಗಳು ಮತ್ತು ಸರ್ವೋಚ್ಚ ನ್ಯಾಯಾಲಯದ ಸೂಕ್ಷ್ಮತೆ ಕೊರತೆಗೆ ಬೆಂಗಳೂರಿನ ಯುವಕನ ಬಲಿ ಮತ್ತು ಅಪಾರ ಆಸ್ತಿ ಪಾಸ್ತಿ ನಷ್ಟ.**

**ಕರ್ನಾಟಕದಲ್ಲಿ ಪ್ರಕ್ಷುಬ್ದ ಪರಿಸ್ಥಿತಿ ನಿವಾರಿಸಲು ಪ್ರಧಾನ ಮಂತ್ರಿಗಳ ತುರ್ತು ಕ್ರಮ ಅನಿವಾರ್ಯ**

**ಕುರಿತು ಪಿಯುಸಿಎಲ್ – ಕರ್ನಾಟಕ ನೀಡಿದ**

**ಪತ್ರಿಕಾ ಹೇಳಿಕೆ**

ಕಾವೇರಿ ನೀರಿನ ಹಂಚಿಕೆ ಬಗ್ಗೆ ಸರ್ವೂಚ್ಚ ನ್ಯಾಯಾಲಯವು ತೀರ್ಪು ನೀಡಿ, 15 ದಿನಗಳವರೆಗೂ ದಿನವೂ 15,000 ಕ್ಯೂಸೆಕ್ಸ್ ನೀರನ್ನು ತಮಿಳುನಾಡಿಗೆ ಬಿಡಬೇಕೆಂದು ನೀಡಿದ ಆದೇಶದಿಂದ ಕರ್ನಾಟಕ ಸರಕಾರ ಮತ್ತು ಜನತೆ ಸಂದಿಗ್ದ ಪರಿಸ್ಥಿತಿಗೆ ಸಿಲುಕಿದ್ದಾರೆ. ಕರ್ನಾಟಕದ ದಕ್ಷಿಣ ಒಳನಾಡಿನಲ್ಲಿ ತೀವ್ರ ಪ್ರತಿಭಟನೆ ನಡೆಯುತ್ತಿದೆ. ಆಗಸ್ಟ್ 5 ರಿಂದ ನಡೆಯುತ್ತಿದ್ದ ಪ್ರತಿಭಟನೆ ಶಮನಗೊಳಿಸಲು ಮತ್ತು ವಾಸ್ತವಾಂಶಗಳನ್ನು ಸರ್ವೂಚ್ಚ ನ್ಯಾಯಾಲಯದ ಮುಂದೆ ಮಂಡಿಸಿ ಪುನರ್ ಪರಿಶೀಲನ ಅರ್ಜಿಯನ್ನು ಕರ್ನಾಟಕ ಸರಕಾರ ಸಲ್ಲಿಸಿತು. ಪ್ರಕರಣದ ಸೂಕ್ಷ್ಮತೆಯನ್ನು ಗ್ರಹಿಸದ ನ್ಯಾಯಾಲಯ ಸಮಸ್ಯೆ ತೀವ್ರವಾಗಿ ಉಲ್ಬಣಗೊಳ್ಳಲು ಕಾರಣವಾಗಿದೆ. ಅಲ್ಲದೇ, ಇಬ್ಬರು ಅಮಾಯಕ ಯುವಕರನ್ನು ಪೊಲೀಸರು ಗುಂಡಿಕ್ಕಿ ಕೊಲ್ಲಲು ಕಾರಣವಾಗಿದೆ. ಎರಡೂ ರಾಜ್ಯಗಳಲ್ಲಿ ಅಪಾರ ಆಸ್ತಿ–ಪಾಸ್ತಿ ನಷ್ಟಕ್ಕೆ ಕಾರಣವಾಗಿದೆ. ಮಾತ್ರವಲ್ಲದೇ, ಪ್ರತಿಭಟನೆಯಿಂದ ವಾಣಿಜ್ಯ ಮತ್ತು ವ್ಯವಹಾರದಲ್ಲಿ ಅಪಾರ ನಷ್ಟವಾಗಿದೆ. ಶೈಕ್ಷಣೀಕ ಚಟುವಟಿಕೆಗಳು ಸ್ಥಗಿತಗೊಳ್ಳಲು ಮತ್ತು ಭಯದ ವಾತಾವರಣದಲ್ಲಿ ನಾಗರೀಕರ ದೈನಂದಿನ ಬದುಕು ಅಸ್ತವ್ಯಸ್ತವಾಗಲು ಕಾರಣವಾಗಿದೆ. ಇಂತಹ ಸೂಕ್ಷ್ಮ ವಿಷಯಗಳಲ್ಲಿ ಮುಂದಾದರೂ ಸಂವಿಧಾನಿಕ ಸಂಸ್ಥೆಗಳಾದ ಸರಕಾರಗಳು ಮತ್ತು ನ್ಯಾಯಾಲಯ ಜವಾಬ್ದಾರಿ ಮತ್ತು ಎಚ್ಚರಿಕೆಯಿಂದ ನಡೆದುಕೊಳ್ಳುವ ಪಾಠ ಈ ಘಟನೆಯಿಂದ ಕಲಿಯಬೇಕಿದೆ.

ಈ ಸಂದರ್ಭದಲ್ಲಿ ತಡೆಯಬಹುದಾದ ಇಂತಹ ಘಟನೆ ಉಲ್ಬಣಗೊಳ್ಳಲು ಕೆಳಗಿನ ಪ್ರಮುಖ ಕೊರತೆಗಳು ಕಾರಣ ಎಂದು ಪಿಯುಸಿಎಲ್ ಅಭಿಪ್ರಾಯ ಪಡುತ್ತದೆ.

1. ಯಾರಿಗೆ ಎಷ್ಟು ನೀರುಬಿಡಬೇಕೆಂಬ ನಿರ್ಣಯ ಮಾಡುವ ಹಕ್ಕು ತಜ್ಞರ ಸಮಿತಿಗೆ ಇರಬೇಕು. ನ್ಯಾಯಾಲಯ ಕೇವಲು ಉಸ್ತುವಾರಿ ಮಾಡುವಂತಿರಬೇಕು.
2. ಸಂಕಷ್ಟಕಾಲದಲ್ಲಿ ನೀರನ್ನು ಹಂಚಿಕೊಳ್ಳುವ ವಿಷಯ ಕುರಿತು ಚರ್ಚಿಸಲು ಅವಕಾಶ ಮಾಡಿ ಕರ್ನಾಟಕ ಮತ್ತು ತಮಿಳುನಾಡು ರೈತರ ವೇದಿಕೆ ರಚಿಸಿ ಸರಕಾರ ಅವರಿಂದ ಅಭಿಪ್ರಾಯ ಪಡೆಯಬೇಕು.
3. ನೀರಿನ ಲಭ್ಯತೆ ಆಧಾರದ ಮೇಲೆ ಯಾವ ಬೆಳೆ ಬೆಳೆಯಬೇಕೆಂಬ ಜವಾಬ್ದಾರಿಯುತ ನಿರ್ಣಯ ತೆಗೆದುಕೊಳ್ಳಲು ಸರಕಾರ ಮತ್ತು ರೈತರಿಗೆ ಇರುವಂತಾಗಬೇಕು.
4. ಸಧ್ಯದ ಪರಿಸ್ಥಿತಿಯಲ್ಲಿ ತಮಿಳುನಾಡು ಮತ್ತು ಕರ್ನಾಟಕದ ಮುಖ್ಯ ಮಂತ್ರಿಗಳು ಮಾತುಕತೆಗಳ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ನಿಟಟಇನಲ್ಲಿ ಒಮ್ಮತಕ್ಕೆ ಬರುವುದು.

ಸಧ್ಯದ ಪರಿಸ್ಥಿತಿಯಲ್ಲಿ ಕರ್ನಾಟಕ ಸರಕಾರ ಭಾಷಾ ಅಲ್ಪಸಂಖ್ಯಾತರ ರಕ್ಷಣೆಗೆ ಒತ್ತು ಕೊಟ್ಟಿದ್ದರೂ ದಶಕಗಳ ಹಿಂದೆ ಕಾವೇರಿ ಚಳವಳಿಯಲ್ಲಿ ನಡೆದ ದಾಳಿ ಕಹಿಅನುಭವದ ಹಿನ್ನೆಲೆಯಲ್ಲಿ ಎರಡೂ ರಾಜ್ಯಗಳಲ್ಲಿ ಮುನ್ನೆಚ್ಚರಿಕೆ ವಹಿಸಲು ಸರಕಾರಗಳು ಸೂಕ್ತಕ್ರಮ ಕೈಗೊಳ್ಳಬೇಕು ಹಾಗೂ ಪ್ರಧಾನ ಮಂತ್ರಿ ಮೋದಿಯವರು ಇಂತಹ ಪರಿಸ್ಥೀಯಲ್ಲಿ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವುದು ಅನಿವಾರ್ಯ ಎಂದು ಪುಯುಸಿಎಲ್ – ಕರ್ನಾಟಕ ಒತ್ತಾಯಿಸುತ್ತದೆ.

ಮಾನ್ಯ ಸಂಪಾದಕರು, ನಾಗರೀಕ ಸಂಘಟನೆಗಳ ಅಭಿಪ್ರಾಯಕ್ಕೆ ಮಾನ್ಯತೆ ನೀಡಿ ನಮ್ಮ ಹೇಳಿಕಎಯನ್ನು ಪ್ರಕಟಿಸಬೇಕೆಂದು ಪಿಯುಸಿಎಲ್ – ಕರ್ನಾಟಕ ಮನವಿ ಮಾಡುತ್ತದೆ.

ಧನ್ಯವಾದಗಳೊಂದಿಗೆ,

ಡಾ. ಆರ್. ವಿ ಚಂದ್ರಶೇಖರ್, ಖಜಾಂಚಿ

ಶ್ರೀ. ಕೆ. ವೆಂಕಟರಾಜು, ಪ್ರಧಾನ ಕಾರ್ಯದರ್ಶಿ

ಪ್ರೊ. ವೈ. ಜೆ. ರಾಜೇಂದ್ರ ರಾಜ್ಯಾಧ್ಯಕ್ಷ